# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-4442/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 21/09/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧದ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿನ ವರದಿ.

*****

1. ಶ್ರೀ.ಎನ್.ಆಂಜಪ್ಪ ಬಿನ್ ನಾರೆಪ್ಪ, ಯಡಹಳ್ಳಿ ಗ್ರಾಮ, ಮೈಲಾಂಡ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಇವರನ್ನು 'ದೂರುದಾರರು' ಎಂದು ಅನುಕೂಲಕ್ಕಾಗಿ ಸಂಭೋದಿಸಲಾಗುವುದು) ಇವರು ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ ದೂರಿನ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. **ಪ್ರಕರಣದ ಸಾರಾಂಶ:**

ದೂರುದಾರರು ತಮ್ಮ ದೂರಿನಲ್ಲಿ ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ, ಯಡಹಳ್ಳಿ ಗ್ರಾಮದ ಸರ್ಕಾರಿ ಸ.ನಂ.1 ರಲ್ಲಿ 4.13 ಗುಂಟೆ ಸರ್ಕಾರಿ ತೋಪು, ಸ.ನಂ.21 ರಲ್ಲಿ 0.39 ಗುಂಟೆ ಸರ್ಕಾರಿ ಕಟ್ಟೆ ಮತ್ತು ಸ.ನಂ.30 ರಲ್ಲಿ 0.16 ಗುಂಟೆ ಸರ್ಕಾರಿ ಖರಾಬ್ ಆಗಿದ್ದು, ಅವುಗಳನ್ನು ಅಳತೆ ಮಾಡಿ ಮಾಹಿತಿ ನೀಡುವಂತೆ ಎದುರುದಾರರಿಗೆ ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಇತರ ಹಿರಿಯ ಅಧಿಕಾರಿಗಳು ಆದೇಶ ನೀಡಿದ್ದರೂ ಸಹ ಸ.ನಂ.21 ರಲ್ಲಿ 0.39 ಗುಂಟೆಯನ್ನು ಮಾತ್ರ ಅಳತೆ ಮಾಡಿ ಉಳಿದ ಸರ್ವೆ ನಂಬರುಗಳನ್ನು ಅಳತೆ ಮಾಡದೆ ನಿರ್ಲಕ್ಷ್ಯ ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರಿಗೆ ನೋಟೀಸು ಜಾರಿಯಾದರೂ ಸಹ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

4. ದೂರುದಾರರು ತಮ್ಮ ದೂರಿನೊಂದಿಗೆ ಎದುರುದಾರರಿಗೆ ನೀಡಿರುವ ಅರ್ಜಿಯ ನಕಲು, ಒಪ್ಪಿಗೆ ಪತ್ರದ ನಕಲು, ವಂಶವೃಕ್ಷದ ಪ್ರಮಾಣ ಪತ್ರದ ನಕಲು, ಮರಣ ಪ್ರಮಾಣ ಪತ್ರದ ನಕಲು ಹಾಗೂ ಹೌಸ್ ಲಿಸ್ಟ್‌ನ್ನು ಲಗತ್ತಿಸಿರುತ್ತಾರೆ.

5. ದೂರುದಾರರು ತನ್ನ ದೂರಿನ ಜೊತೆ ಉಪ ವಿಭಾಗಾಧಿಕಾರಿಗಳು ಮತ್ತು ಮೇಲ್ಮನವಿ ಪ್ರಾಧಿಕಾರ ಚಿಕ್ಕಬಳ್ಳಾಪುರ ಉಪ ವಿಭಾಗ ಇವರು ದಿ.26/11/12 ರಂದು ಮಾಡಿರುವ ಆದೇಶದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ, ದಿ.10/12/12 ರ ಒಳಗಾಗಿ ಅರ್ಜಿದಾರರಿಗೆ ಮಾಹಿತಿಯನ್ನು ನೀಡಿ ದಾಖಲೆಗಳನ್ನು ಒದಗಿಸಲು ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು, ಇವರಿಗೆ ಆದೇಶಿಸಿರುವುದು ಕಂಡುಬರುತ್ತದೆ. ಆದರೆ, ತಹಶೀಲ್ದಾರ್‌ರವರು ಮೇಲ್ಮನವಿ ಪ್ರಾಧಿಕಾರದ ಆದೇಶವನ್ನು ಪಾಲಿಸಿರುವುದು ಕಂಡುಬಂದಿರುವುದಿಲ್ಲ ಮತ್ತು ಸದರಿ ಆದೇಶದ ಮೇರೆಗೆ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ಯಾವುದೇ ವರದಿಯನ್ನು ನೀಡಿರುವುದಿಲ್ಲ. ಎದುರುದಾರರ ಸದರಿ ನಡವಳಿಕೆಯು ಫಿರ್ಯಾದುದಾರರಿಗೆ ಅನುಚಿತ ತೊಂದರೆಯನ್ನು ಉಂಟು ಮಾಡಿರುವುದು ಕಂಡುಬರುತ್ತದೆ.

6. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ದೂರುದಾರರ ದೂರಿನ ಬಗ್ಗೆ ಪರಿಶೀಲಿಸಿ, ಮೂರು ತಿಂಗಳೊಳಗಾಗಿ ದೂರುದಾರರಿಗೆ ಸೂಕ್ತ ಪರಿಹಾರವನ್ನು ಒದಗಿಸಿ, ತರುವಾಯ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರನ್ವಯ ಕೈಗೊಂಡ ಕ್ರಮದ ಬಗ್ಗೆ ತಮ್ಮ ವರದಿಯನ್ನು ಸಲ್ಲಿಸಲು ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

21/9/16.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.